ದಿನಾಂಕ ಃ 23.09.2024
ಅಸಲು ದಾವೆ: 104/2019
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಎನ್.ಎಸ್ ರವರಿಂದ ಃ</u>**

ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ. ಪ್ರತಿವಾದಿಯರು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಾನು ಜಾಗ ತೆಗೆದುಕೊಂಡಾಗಿನಿಂದ ಪರಿಚಯ ಎಂದು ಉತ್ತರಿಸುತ್ತಾರೆ. ನಾನು ಜಾಗವನ್ನು ನೋಡಿದ್ದೇನೆ. ಸದರಿ ಜಾಗ ಮದ್ದೂರಿನಲ್ಲಿ ಕೆಮ್ಮಣ್ಣು ಕಾಲುವೆ ಸರ್ಕಲ್ ಮುಂದೆ ಪಕ್ಕ ಇರುತ್ತದೆ. ನಾನು ಖುದ್ದಾಗಿ ಸದರಿ ಜಾಗವನ್ನು ನೋಡಿರುತ್ತೇನೆ. ಸದರಿ ಜಾಗವನ್ನು 8 ವರ್ಷಗಳ ಹಿಂದೆ ನೋಡಿರುತ್ತೇನೆ. ಆ ಜಾಗವನ್ನು ನನಗೆ ಬಸವಯ್ಯನವರು ತೋರಿಸಿರುತ್ತಾರೆ. ಬಸವಯ್ಯ ನಗರಕೆರೆಯವರು. ಜಾಗದಲ್ಲಿ ಏನಿದೆ ಎಂದರೆ ಸಾಕ್ಷಿ ಏನು ಇಲ್ಲ ಖಾಲಿ ಇದೆ ಎಂದು ಉತ್ತರಿಸುತ್ತಾರೆ. ಸದರಿ ಜಾಗವನ್ನು ನಾನು ತೆಗೆದುಕೊಳ್ಳುವ 15 -20 ದಿನಗಳ ಹಿಂದೆ ನನಗೆ ತೋರಿಸಿದ್ದರು. ಸದರಿ ಜಾಗ ಗದ್ದೆಯಾಗಿರುತ್ತದೆ. ಸದರಿ ಗದ್ದೆ ಮಮತರವರ ಹೆಸರಿನಲ್ಲಿ ಇತ್ತು. ಸದರಿ ಜಮೀನು ಮಮತರವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ಅವರ ತಾಯಿಯ ಕಡೆಯಿಂದ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಆ ಸಂಬಂಧ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ಏನು ದಾಖಲಾತಿಗಳನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಆರ್.ಟಿ.ಸಿ. , ಎಂ.ಆರ್. ಪತ್ರ ನೋಡಿರುತ್ತೇನೆ. ಏನು ಪತ್ರ ಎಂದರೆ ಸಾಕ್ಷಿ ಮಮತರವರ ಹೆಸರಿಗೆ ಇರುವ ಪತ್ರ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಅದು ಯಾವ ಪತ್ರ ಎಂದರೆ ಸಾಕ್ಷಿ ಮಮತರವರ ತಾಯಿ ಅವರ ಹೆಸರಿಗೆ ಮಾಡಿಕೊಟ್ಟಿರುವ ವಿಲ್ ಪತ್ರ ಎಂದು ಉತ್ತರಿಸುತ್ತಾರೆ. ಯಾವ ವರ್ಷ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ದಿನಾಂಕ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಮಮತಾರವರ ತಾಯಿಯ ಹೆಸರು ಮತ್ತು ಅವರು ಯಾವ ಊರಿನವರು ಎಂಬುದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಚೆಕ್ ಬಂದಿ ಮತ್ತು ಸರ್ವೆ ನಂಬರ್ ಹೇಳಲು ಆಗುತ್ತದೆ. ಸರ್ವೆ ನಂ.640/3 ಎ 1, ಪೂರ್ವಕ್ಕೆ - ಸ್ವಾಮಿಯವರ ಜಮೀನು, ಪಶ್ಚಿಮಕ್ಕೆ - ಕರಿಯಪ್ಪನವರ ಜಮೀನು, ಉತ್ತರಕ್ಕೆ - ಶ್ರೀನಿವಾಸ್ ರವರ ಜಮೀನು, ದಕ್ಷಿಣಕ್ಕೆ - ರಾಜಶೇಖರ್ ರವರ ಜಮೀನು. ಸದರಿ ಮೇಲೆ ಹೇಳಿದ ಚೆಕ್ ಬಂದಿ ಜಮೀನುಗಳು ಉಳುಮೆ ಮಾಡುವಂತಹ ಜಮೀನುಗಳು.

ಬಸವಯ್ಯನವರು ನನ್ನನ್ನು ಮಮತರವರ ಮನೆಗೆ ಮಾತುಕತೆಗೆ ಕರೆದುಕೊಂಡು ಹೋಗಿದ್ದರು. ದಿನಾಂಕ ಹೇಳಲು ಆಗುವುದಿಲ್ಲ, ನಾನು ತೆಗೆದುಕೊಳ್ಳುವ 15-20 ದಿನಗಳ ಮುಂಚೆ ಕರೆದುಕೊಂಡು ಹೋಗಿದ್ದರು. ನಾನು ಅವರ ಮನೆಗೆ ಹೋಗಿದ್ದಾಗ ಅಂದಾನಿಯವರು, ಮಮತರವರು ಮತ್ತು ಅವರ ಮಕ್ಕಳು ಇದ್ದರು. ಜಾಗ ಬೇಕು ಕೊಡಿಸಿ ಎಂದು ನಾನು ಬಸವಯ್ಯನವರಿಗೆ ಹೇಳಿದ್ದೆನು, ಅವರು ಇಂತಹ ಕಡೆ ಜಾಗ ಇದೆ ಬಾ ಕೊಡಿಸುತ್ತೇನೆ ಎಂದು ಹೇಳಿ

ಅವರ ಮನೆಗೆ ಕರೆದುಕೊಂಡು ಹೋಗಿದ್ದರು. ಅವರ ಮನೆಯಲ್ಲಿ ವ್ಯಾಪಾರ ನಡೆಯಿತು. ಮಮತ ಮತ್ತು ಅಂದಾನಿಯವರು 8 ವರೆ ಲಕ್ಷ ಹೇಳಿದರು. ಆಗ ನಾವು ವ್ಯಾಪಾರಕ್ಕೆ ಕೇಳಿದೆವು, ರೂ.6,70,000/- ಕ್ಕೆ ಮಾತನಾಡಿದೆವು. ಆ ಮೊತ್ತಕ್ಕೆ ವ್ಯಾಪಾರ ಆಗಲಿಲ್ಲ, ಆಗ ಬಸವಯ್ಯನವರು ರೂ.7,75,000/- ಕ್ಕೆ ವ್ಯಾಪಾರ ಮಾಡಿದರು. ನಾನು ವ್ಯವಸಾಯ ಮತ್ತು ಹಂದಿ ಸಾಕಾಣಿಕೆ ಮಾಡುತ್ತೇನೆ. ನನಗೆ 3 ಎಕರೆ ಜಮೀನು ಇರುತ್ತದೆ. ನನಗೆ 3 ಎಕರೆಯಲ್ಲಿ ತೆಂಗಿನತೋಟ ಇರುತ್ತದೆ. ನಾವು ಇಬ್ಬರು ಅಣ್ಣ ತಮ್ಮಂದಿರು. ತೆಂಗಿನ ತೋಟದಿಂದ ರೂ.50 ರಿಂದ 70,000 ಆದಾಯ ಬರುತ್ತದೆ. ನಾವು ಬಿ.ಪಿ.ಎಲ್ ರೇಷನ್ ಕಾರ್ಡ್ ಬಳಕೆ ಮಾಡುತ್ತಿದ್ದೇವೆ. ನನಗೆ ಬ್ಯಾಂಕ್ ಅಕೌಂಟ್ ಇರುತ್ತದೆ. ಆದರೆ ಉಪಯೋಗ ಮಾಡುತ್ತಿಲ್ಲ. ನನಗೆ ಎಸ್.ಬಿ.ಐ ಬ್ಯಾಂಕಿನಲ್ಲಿ ಮಾತ್ರ ಒಂದು ಅಕೌಂಟ್ ಇರುತ್ತದೆ. ನನ್ನ ಸ್ವಂತ ಊರು ಕಂಪಲಾಪುರ , ನಾನು ಈಗ ವಾಸವಿರುವುದು ಯಡಿಯೂರಿನಲ್ಲಿ. ಸುಮಾರು 6-7 ವರ್ಷಗಳಿಂದ ಯಡಿಯೂರಿನಲ್ಲಿ ವಾಸವಿದ್ದೇನೆ, ಅಲ್ಲಿ ಆಟೋ ಓಡಿಸುತ್ತಿದ್ದೇನೆ ಮತ್ತು ಹಂದಿ ಸಾಕಾಣಿಕೆ ಮಾಡುತ್ತಿದ್ದೇನೆ. ಹಂದಿ ಸಾಕಾಣಿಕೆಯನ್ನು ನಮ್ಮ ಊರಾದ ಕಂಪಲಾಪುರ ಮತ್ತು ಯಡಿಯೂರಿನಲ್ಲಿ ಮಾಡುತ್ತೇನೆ. ಹಂದಿ ಸಾಕಾಣಿಕೆ ಮಾಡಲು ಪರವಾನಗಿ ತೆಗೆದುಕೊಂಡಿರುವುದಿಲ್ಲ. ಸುಮಾರು 100 ರಿಂದ 150 ಹಂದಿ ಸಾಕಾಣಿಕೆ ಮಾಡುತ್ತೇವೆ. ಹಂದಿ ಸಾಕಾಣಿಕೆ ಮಾಡಲು ಪಂಚಾಯಿತಿಯವರಿಂದ ಪರವನಾಗಿ ತೆಗೆದುಕೊಳ್ಳಬೇಕು ಎಂದರೆ ಸರಿ. ನಾನು ಪರವಾನಗಿ ತೆಗೆದುಕೊಂಡಿರುವುದಿಲ್ಲ, ನಮ್ಮ ತಾತನ ಕಾಲದಿಂದಲೂ ಹಾಗೆಯೇ ಸಾಕಾಣಿಕೆ ಮಾಡಿಕೊಂಡು ಬರುತ್ತಿದ್ದೇವೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.